ಕರ್ನಾಟಕಸರ್ಕಾರ

(ಕಂದಾಯಇಲಾಖೆ)

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ದೂರವಾಣಿ ಸಂಖ್ಯೆ:0821-2424079,2422110,2428383

ಫ್ಯಾಕ್ಸ್ ನಂ : 2429012 & 2428383 E-Mail : dcofficemysuru@gmail.com

ಸಂಖ್ಯೆ :MYSDC- MAG1 /MLO/71/2020 ದಿನಾಂಕ: 21/03/2020

ಉಪನಿರ್ದೇಶಕರು
ವಾರ್ತಾ ಮತ್ತು ಪ್ರಚಾರ ಇಲಾಖೆ
ಮೈಸೂರು

COVID-19

ಮಾನ್ಯರೇ

ವಿಷಯ: ಕೋವಿಡ್-19 (ಕರೊನಾ ವೈರಾಣು ಕಾಯಿಲೆ-2019)ಯ ಸ್ಫೋಟ ಮತ್ತು ಹರಡುವುದನ್ನು ತಡೆಗಟ್ಟುವ ಹಾಗೂ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಸಂಬಂಧ ಸಾಮಾಜಿಕ ಮಾಧ್ಯಮಗಳಲ್ಲಿ ನೇರ ಪ್ರಸಾರದ ಮೂಲಕ (Live streaming) ಪ್ರಚಾರ ಮಾಡುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸಾಂಕ್ರಾಮಿಕ ರೋಗಗಳು, COVID-19 ರೆಗ್ಯೂಲೇಷನ್ಸ್ -2020ರ ಅಧಿಸೂಚನೆ ಸಂಖ್ಯೆ: ಹೆಚ್.ಎಫ್,ಡಬ್ಲ್ಯೂ,54 ಸಿ ಜಿ ಎಂ 2020 ದಿನಾಂಕ: 11.03.2020.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಆದೇಶ ಸಂಖ್ಯೆ DD/SSU/COVID-19/17/19-20 ದಿನಾಂಕ:13-03-2020
3. ಸರ್ಕಾರದ ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ.157 ಟಿ ಎನ್ ಆರ್ 2020, ದಿನಾಂಕ:14.03.2020
4. ಮಾನ್ಯ ಕಂದಾಯ ಸಚಿವರು ಕರ್ನಾಟಕ ಸರ್ಕಾರ ರವರ ಪತ್ರದ ಸಂಖ್ಯೆ: ಕಂ.ಸ 678 / 2020 ದಿನಾಂಕ: 18.03.2020
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಪರಿಷ್ಕೃತ ಆದೇಶ ಸಂಖ್ಯೆ DD/SSU/COVID-19/17/19-20 ದಿನಾಂಕ: 20-03-2020

DISTRICT MAGISTRATE MYSORE DISTRICT

*****

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ COVID-19 ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ವೈಯಕ್ತಿಕ ಮತ್ತು ಸಮುದಾಯದ ತುರ್ತು ಪರಿಸ್ಥಿತಿಯನ್ನು ಎದುರಿಸಲು ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ರಾಜ್ಯದಲ್ಲಿ ಕೊರೊನಾ ರೋಗಾಣು ಹರಡುತ್ತಿರುವ ಬಗ್ಗೆ ಹಿನ್ನಲೆಯಲ್ಲಿ ಸರ್ಕಾರವು ಉಲ್ಲೇಖ (2) ರ ಆದೇಶದಲ್ಲಿ Disaster Management Act 2005 ರ ವಿಧಿ 22 ರ ಉಪಪ್ರಕರಣ 2 (H) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು

ಚಲಾಯಿಸಿ ಸದರಿ ಕಾಯ್ದೆಯ ಕಲಂ 24 (a) (b) (f) (h) (j) (k) ಮತ್ತು (l) ರಡಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಿಗೆ (ಜಿಲ್ಲಾಧಿಕಾರಿಗಳು) COVID-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಆದೇಶಿಸಲಾಗಿರುತ್ತದೆ.

ಈಗಾಗಲೇ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಕರೋನಾ ವೈರಾಣು ಹರಡುವುದನ್ನು ತಡೆಗಟ್ಟುವ ಸಂಬಂಧ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಆದಾಗ್ಯೂ ಸಾಮಾಜಿಕ ಜಾಲ ತಾಣಗಳಲ್ಲಿ ಕೆಲವು ಬಾರಿ ಉತ್ಪ್ರೇಕ್ಷಿತ ಮತ್ತು ಸುಳ್ಳು ಸುದ್ದಿಗಳು ಹರಡುತ್ತಿದ್ದು ಇದರಿಂದ ಸಾರ್ವಜನಿಕರು ಗಾಬರಿಗೊಳ್ಳುವಂತಹ ಸಂದರ್ಭ ಉಂಟಾಗುತ್ತದೆ. ಆದುದರಿಂದ ಇನ್ನು ಮುಂದೆ ಜಿಲ್ಲಾ ಮಟ್ಟದಲ್ಲಿ ಕರೋನಾ ವೈರಾಣು ಸೋಂಕಿಗೆ ಸಂಬಂಧಪಟ್ಟಂತೆ ನಡೆಸಲಾಗುವ ಎಲ್ಲಾ ಪತ್ರಿಕಾಗೋಷ್ಠಿಗಳನ್ನು ನೇರ ಪ್ರಸಾರ (Live Streaming) ಮಾಡಲು ಹಾಗೂ ಇದನ್ನು ಸಾಮಾಜಿಕ ಜಾಲತಾಣಗಳ (Social Media Network) ಮೂಲಕ ಹೆಚ್ಚು ಸಾರ್ವಜನಿಕರಿಗೆ ತಲುಪುವಂತೆ ಮಾಡಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಕೊಳ್ಳಲು ಕೋರಿದೆ.

DISTRICT MAGISTRATE
MYSORE DISTRICT

ತಮ್ಮ ನಂಬುಗೆಯ

21/3

(ಅಭಿರಾಮ್ ಜಿ.ಶಂಕರ್)
ಜಿಲ್ಲಾಧಿಕಾರಿ
ಹಾಗೂ ಜಿಲ್ಲಾ ದಂಡಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು

ಪ್ರತಿಯನ್ನು:-ಕೆಳಕಂಡವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

1. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
2. ಪೊಲೀಸ್ ಆಯುಕ್ತರು, ಮೈಸೂರು ನಗರ, ಮೈಸೂರು.
3. ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು.
5. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
6. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು